# ವ್ಯಾಕರಣ ವಿಭಾಗ

# ವೃತ್ತಗಳು

## ತರಗತಿ - 10

# ಖ್ಯಾತ ಕರ್ನಾಟಕ ವೃತ್ತಗಳು

## 6

1) ಉತ್ಪಲಮಾಲಾವೃತ್ತ - 20 ಅಕ್ಷರ
2) ಚಂಪಕಮಾಲಾವೃತ್ತ - 21 ಅಕ್ಷರ
3) ಶಾರ್ದೂಲವಿಕ್ರೀಡಿತವೃತ್ತ - 19 ಅಕ್ಷರ
4) ಮತ್ತೇಭವಿಕ್ರೀಡಿತವೃತ್ತ - 20 ಅಕ್ಷರ
5) ಸ್ರಗ್ಧರಾವೃತ್ತ - 21 ಅಕ್ಷರ
6) ಮಹಾಸ್ರಗ್ಧರಾವೃತ್ತ - 22 ಅಕ್ಷರ

# 1) ಉತ್ಪಲಮಾಲಾವೃತ್ತ

## ಲಕ್ಷಣಗಳು :

1) ಇದು ನಾಲ್ಕು ಸಾಲುಗಳುಳ್ಳ ಸಮ ಪದ್ಯ

2) ಪ್ರತಿಯೊಂದು ಸಾಲಿನಲ್ಲೂ 20 ಅಕ್ಷರಗಳಿರುತ್ತವೆ.

3) ಪ್ರತಿಯೊಂದು ಸಾಲಿನಲ್ಲೂ ಭ, ರ, ನ, ಭ, ಭ, ರ ಎಂಬ ಗಣಗಳು ಬಂದು ಕೊನೆಯಲ್ಲಿ ಒಂದು ಲಘು, ಗುರು ಬರುತ್ತದೆ.

* ಉತ್ಪಲ ಮಾಲೆಯುಪ್ಪದು 'ಭರನಭಭ ರಲಗಂ' ನೆಗಳ್ದಿರಲ್

# 2) ಚಂಪಕಮಾಲಾವೃತ್ತ

## ಲಕ್ಷಣಗಳು :

1) ಇದು ನಾಲ್ಕು ಸಾಲುಗಳುಳ್ಳ ಸಮ ಪದ್ಯ

2) ಪ್ರತಿಯೊಂದು ಸಾಲಿನಲ್ಲೂ 21 ಅಕ್ಷರಗಳಿರುತ್ತವೆ.

3) ಪ್ರತಿಯೊಂದು ಸಾಲಿನಲ್ಲೂ ನ, ಜ, ಭ, ಜ, ಜ, ಜ, ರ ಎಂಬ ಗಣಗಳು ಬರುತ್ತದೆ.

ಸೂತ್ರ : 'ನಜಭಜಜಂಜರಂ'
ಬಗೆಗೊಳ್ಳುತ್ತಿರೆ ಚಂಪಕಮಾಲೆಯೆಂದಪರ್

# 3) ಶಾರ್ದೂಲವಿಕ್ರೀಡಿತವೃತ್ತ

## ಲಕ್ಷಣಗಳು :

1) ಇದು ನಾಲ್ಕು ಸಾಲುಗಳುಳ್ಳ ಸಮ ಪದ್ಯ

2) ಪ್ರತಿಯೊಂದು ಸಾಲಿನಲ್ಲೂ 19 ಅಕ್ಷರಗಳಿರುತ್ತವೆ.

3) ಪ್ರತಿಯೊಂದು ಸಾಲಿನಲ್ಲೂ ಮ, ಸ, ಜ, ಸ, ತ, ತ, ಎಂಬ ಗಣಗಳು ಬಂದು ಕೊನೆಯಲ್ಲಿ ಒಂದು ಗುರು ಬರುತ್ತದೆ.

ಸೂತ್ರ : ಕಣ್ಗೊಪ್ಪಲ್ ಮಸಜಂಸತಂತ ಗಮಮಾಮಾ ಶಾರ್ದೂಲ ವಿಕ್ರೀಡಿತ'

# 4) ಮತ್ತೇಭ ವಿಕ್ರೀಡಿತವೃತ್ತ

## ಲಕ್ಷಣಗಳು :

1) ಇದು ನಾಲ್ಕು ಸಾಲುಗಳುಳ್ಳ ಸಮ ಪದ್ಯ

2) ಪ್ರತಿಯೊಂದು ಸಾಲಿನಲ್ಲೂ 20 ಅಕ್ಷರಗಳಿರುತ್ತವೆ.

3) ಪ್ರತಿಯೊಂದು ಸಾಲಿನಲ್ಲೂ ಸ, ಭ, ರ, ನ, ಮ, ಯ ಎಂಬ ಗಣಗಳು ಬಂದು ಕೊನೆಯಲ್ಲಿ ಒಂದು ಲಘು ಗುರು ಬರುತ್ತದೆ.

ಸೂತ್ರ : ಸಭರಂನಂಮಯಲಂಗಮುಂ

ಬಗೆಗೊಳಲ್ ಮತ್ತೇಭ ವಿಕ್ರೀಡಿತಂ'

# 5) ಸ್ರಗ್ಧರಾವೃತ್ತ

**ಲಕ್ಷಣಗಳು :**

1) ಇದು ನಾಲ್ಕು ಸಾಲುಗಳುಳ್ಳ ಸಮ ಪದ್ಯ

2) ಪ್ರತಿಯೊಂದು ಸಾಲಿನಲ್ಲೂ 21 ಅಕ್ಷರಗಳಿರುತ್ತವೆ.

3) ಪ್ರತಿಯೊಂದು ಸಾಲಿನಲ್ಲೂ ಮ, ರ, ಭ, ನ, ಯ, ಯ ಮ, ಎಂಬ ಗಣಗಳಿಂದ ಕೂಡಿರುತ್ತದೆ.

**ಸೂತ್ರ : ತೋರಲ್ ಮಂ ರಂಭನಂ ಯಾಯಗ ಣಮುಮ ದೆ ತಾಂಸ ಸ್ರಗ್ಧರಾವೃ ತ್ತ ಮಕ್ಕಂ'**

# 6) ಮಹಾಸ್ರಗ್ಧರಾವೃತ್ತ

## ಲಕ್ಷಣಗಳು :

1) ಇದು ನಾಲ್ಕು ಸಾಲುಗಳುಳ್ಳ ಸಮ ಪದ್ಯ
2) ಪ್ರತಿಯೊಂದು ಸಾಲಿನಲ್ಲೂ 22 ಅಕ್ಷರಗಳಿರುತ್ತವೆ.
3) ಪ್ರತಿಯೊಂದು ಸಾಲಿನಲ್ಲೂ ಸ, ತ, ತ, ನ, ಸ, ರ, ರ ಎಂಬ ಗಣಗಳು ಬಂದು ಕೊನೆಯಲ್ಲಿ ಒಂದು ಗುರು ಕೂಡಿರುವುದು.

ಸೂತ್ರ : ಸತತಂನಂಸಂರರಂಗಂ ನೆರೆದಸೆಯೆ ಮಹಾ ಸ್ರಗ್ಧರಾವೃತ್ತಮಕ್ಕುಂ'





# ವೃತ್ತಗಳನ್ನು ಗುರುತಿಸಲು ಒಂದು ಸುಲಭ ಸೂತ್ರ

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ ಮೂರಾಗೆ ಶಾರ್ದೂಲಮಾ

ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘುದ್ವಂದ್ವಂ ಗುರುದ್ವಂದ್ವಮಾ



ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ



ಹರಿಣಾಕ್ಷಿ ಲಘುನಾಲ್ಕು ಚಂಪಕಮಿವಾರುಂ ಖ್ಯಾತ ಕರ್ಣಾಟಕಂ